ಹಲವಾರು ವರ್ಷಗಳಿಂದ ಒಬ್ಬರೇ ಬದುಕುತ್ತಿದ್ದ ಅಜ್ಜ, ಈಗ ಬಂದ ಕೆಲಸ ಮುಗಿಯಿತೆಂದು ನಿರ್ಗಮಿಸಿದ್ದರು. ಅವರ ನಿರ್ಗಮನದ ನಂತರ ಒಂದಿಷ್ಟು ಸಮಸ್ಯೆಗಳು ನಮ್ಮ ಪಾಲಿಗೆ ಆಗಮಿಸಿದವು. ಅಜ್ಜಿ ಕಣ್ಮುಚ್ಚಿ ಹತ್ತು ವರ್ಷಗಳಾಗಿದ್ದವು. ಅವರ ಒಬ್ಬನೇ ಮಗ ಕೆನಡಾದಲ್ಲಿ ನೆಲೆಸಿ 20 ವರ್ಷಗಳ ಮೇಲಾಗಿತ್ತು. ಹಾಗಾಗಿ ಇದ್ದ ನಾಲ್ಕಾರು ಎಕರೆ ಪಿತ್ರಾರ್ಜಿತ ಆಸ್ತಿಯನ್ನು ರೂಢಿಸುವವರು ಯಾರು? 'ನೀನೆ ಏನಾದ್ರೂ ವ್ಯವಸ್ಥೆ ಮಾಡು, ಯಾರನ್ನಾದ್ರೂ ಅಲ್ಲಿ ತಂದಿಡು' ಎಂದು ಸೋದರಮಾವ ಇದನ್ನು ನನ್ನ ತಲೆಗೇ ಕಟ್ಟಿ, ಕೆನಡಾಗೆ ಮರಳಿದ್ದ. ಈ ಹೊತ್ತಿನಲ್ಲಿ ನನಗೆ ನೆನಪಾಗಿದ್ದು ನಮ್ಮ ಅಚ್ಚೆಕುಮಾರ. ನಮ್ಮ ಬೆನ್ನ ಹಿಂದೆಯೂ ಪ್ರಾಮಾಣಿಕವಾಗಿ ಕೆಲಸ ಮಾಡಲು ಇವನಿಗಿಂತ ಬೇರೆಯವರು ಯಾರು ಸಿಕ್ಕಾರು? ಇಲ್ಲಿಯ ಸಮಸ್ಯೆ ಮುಗಿಯುವಂತಿಲ್ಲ, ಅವನಿಗೆ ಸಂಬಳ ಸಿಕ್ಕುವ ಥರವೂ ಇಲ್ಲ. ಇನ್ನಿಲ್ಲಿ ದುಡಿದೇನು ಫಲ ಎನ್ನುವ ತರ್ಕದೊಂದಿಗೆ ಅವನ ಬಳಿ ಊರಿನ ಜಮೀನು ನೋಡಿಕೊಳ್ಳುವ ಪ್ರಸ್ತಾಪ ಇಟ್ಟೆ. 'ನಮ್ಮೂರಿನಲ್ಲಿ ನಾವೂ ಕೃಷಿಕರೇ' ಎನ್ನುತ್ತಾ ಸಂತೋಷದಿಂದ ಒಪ್ಪಿಕೊಂಡ. ದುಡಿದು ಉಣ್ಣುವವರಿಗೆ ಎಲ್ಲಾದರೇನು?

ಇದೆಲ್ಲಾ ಆಗಿ ಮೂರು ವರ್ಷಗಳೇ ಕಳೆದಿವೆ. ಒಮ್ಮೆ ಸಕ್ರೆಬೈಲಿನ ನಮ್ಮ ಜಮೀನಿಗೆ ಹೋದರೆ ಸಾಕು, 'ಬಹುತ್ ದೇರ್ ಕರ್ದಿ ಆನೇ ಮೆ! ಕಬ್ ಸೆ ಖಾನಾ ಬನಾಕೆ ಬೈಠಾ ಹೂಂ... ಹಾತ್ ಮೂ ಧೋಲೀಜಿಯೆ. ಬಾದ್ ಮೆ ಬಾತ್ ಕರೇಂಗೆ (ಬರುವುದಕ್ಕೆ ತುಂಬಾ ತಡ ಮಾಡಿದಿರಲ್ಲ! ಯಾವಾಗಲಿಂದ ಅಡಿಗೆ ಮಾಡಿಕೊಂಡು ಕಾಯುತ್ತಿದ್ದೇನೆ... ಕೈಕಾಲು ತೊಳೆದುಕೊಳ್ಳಿ, ಆಮೇಲೆ ಮಾತಾಡಿದರಾಯ್ತು) ಎಂದು ಅಮ್ಮನಂತೆಯೇ ಕಾಳಜಿ ಮಾಡುತ್ತಿದ್ದ. ಊಟ ಮಾಡಲು ಚೊರೆ ಮಾಡುತ್ತಿದ್ದ ನಮ್ಮ ಪುಟ್ಟನನ್ನು ಸೊಂಟಕ್ಕೆ ಹಾಕಿಕೊಂಡು ಕೊಟ್ಟಿಗೆಯ ಹಸುಕರುಗಳನ್ನು ತೋರಿಸುತ್ತಾ ತಿನ್ನಿಸುತ್ತಿದ್ದ. ಅವನಿಗೆ ಹದವಾಗಿ ಎಣ್ಣೆ ಒತ್ತಿ, ಬಿಸಿಬಿಸಿ ನೀರಲ್ಲಿ ಸ್ನಾನ ಮಾಡಿಸುತ್ತಿದ್ದ. ಅಚ್ಚೆ ಮಾಮ ಎಂಬುದು ನಮ್ಮ ಪುಟ್ಟನ ಬಾಯಲ್ಲಿ 'ಅತ್ತೆ ಮಾಮ' ಆಗಿತ್ತು! ಕೆಲಸದಲ್ಲೂ ಕಟ್ಟುನಿಟ್ಟು, ಅಚ್ಚುಕಟ್ಟು. 'ಈ ಬಾರಿ ಬದನೆಕಾಯಿಯ ಗಾತ್ರ ನೋಡಿ, ನಮ್ಮ ಪುಟ್ಟನ ತಲೆಯಷ್ಟೇ ಇದೆ. ತೊಂಡೆ ಚಪ್ಪರ ನೋಡಿ, ಅಡಿಗೊಂದು ಮದುವೆಯನ್ನೇ ಮಾಡುವಷ್ಟು ದೊಡ್ಡದಾಗಿದೆ' ಎಂದೆಲ್ಲಾ ಹೇಳುತ್ತಾ ಜಮೀನು ಸುತ್ತಿಸುತ್ತಿದ್ದ. ಅಷ್ಟಾದರೂ ಸರಿಯಾಗಿ ಕನ್ನಡ ಕಲಿಯದೆ, ಆಳುಮಕ್ಕಳೊಂದಿಗೆ ಅವನದ್ದೇ ಆದ 'ಹಿನ್ನಡ' ಭಾಷೆಯಲ್ಲಿ ಬೇಳೆ ಬೇಯಿಸಿಕೊಳ್ಳುತ್ತಿದ್ದ. 'ಹೆಂಡತಿ ಮಕ್ಕಳನ್ನೂ ಬೇಕಿದ್ರೆ ಇಲ್ಲೇ ಕರೆಸಿಕೊ' ಎಂದರೆ, 'ಅಲ್ಲಿರಲಿ ಬಿಡಿ. ನಾನೇ ಹೋಗುತ್ತೇನಲ್ಲ. ಇಲ್ಲಾದರೆ ಶಾಲೆಯದೆಲ್ಲಾ ತಾಪತ್ರಯ. ಅಲ್ಲಾದರೆ ಓದಿನ ಖರ್ಚೂ ಕಡಿಮೆ. ಸ್ವಲ್ಪ ದುಡ್ಡೂ ಉಳಿಯುತ್ತದೆ. ಅಪ್ಪಅಮ್ಮನಿಗೆ ವಯಸ್ಸಾಯ್ತು. ಔಷಧಿಗೆಲ್ಲಾ ಬೇಕಲ್ಲ' ಎಂದಾಗ ನನಗೂ ಹೌದೆನ್ನಿಸಿತ್ತು. ಒಟ್ನಾರೆ ಅವನಲ್ಲಿ ಇದ್ದುದರಿಂದ ಜಮೀನಿನ ಬಗ್ಗೆ ನನಗಂತೂ ತಲೆಬಿಸಿ ಕಡಿಮೆಯಾಗಿತ್ತು.

ಆದರೀಗ... ಇದೇನು ಸುದ್ದಿ ಬಂತು? ಆತ ಅರೆಸ್ಟ್ ಆಗುವಂಥದ್ದೇನಾಯ್ತು?

'ಹಾವು, ಜಿಂಕೆ, ಮೊಲದ ಚರ್ಮ, ಕೊಂಬುಗಳನ್ನು ಸಾಗಾಣಿಕೆ ಮಾಡುತ್ತಿದ್ದನಂತೆ' ಎಂದು ಗಿರಿಧರ ಹೇಳಿದಾಗ ಮೈಮೇಲೆ ಹಾವೇ ಬಿದ್ದಂತಾಯ್ತು ನನಗೆ.

ಅಚ್ಚೆ ಇಂಥ ಕೆಲಸ ಮಾಡುವವನೆ! 'ಸಾಧ್ಯವೇ ಇಲ್ಲ ಗಿರಿಧರ. ಎಲ್ಲೋ ತಪ್ಪುಗಂಟಾತು, ಬಹುಶಃ ನಿಯತ್ತಿನ ಮನುಷ್ಯ ಅಂವ' ಎಂದು ವಕೀಲನ ಬಳಿ ವಕಾಲತ್ತಿಟ್ಟೆ.

'ಪೊಲೀಸರ ಹತ್ರ ಸಾಕ್ಷ್ಯ ಇದ್ದಪ. ಜಿಂಕೆ ಹೊಡೆದಿದ್ದು ಇಂವ ಅಲ್ಲ. ಆದ್ರೆ ಚರ್ಮ, ಕೊಂಬು ಎಲ್ಲಾ ಸಾಗಾಣಿಕೆ ಮಾಡ್ತಾ ಇದ್ದಿದ್ದ ಹೇಳ್ತ. ಎರಡು ತಿಂಗಳಿಂದ ಪೊಲೀಸರು ಸದ್ದಿಲ್ಲದೆ ಬೆನ್ನು ಬಿದ್ದಿದ್ದ. ಇವಕ್ಕೆಲ್ಲಾ ಗೊತ್ತೇ ಆಜಿಲ್ಲೆ. ಊರಿನ ಇನ್ನೂ ಇಬ್ರು ಹುಡುಗ್ರು ಅರೆಸ್ಟ್ ಆಜ. ಒಬ್ಬೊಬ್ರನ್ನೇ ಆಗಿ